ಆಗಲೇ ದೊಡ್ಡದು ಮಾಡಿಕೊಂಡಿದ್ದೇನೆ. ಇನ್ನು ಇದೂ ಚೆನ್ನಾಗಿತ್ತು ಅಂದರೆ ಮುಗಿಯಿತು. ನಾನು ಮತ್ತೆ ಹತ್ತಿಯನ್ನು ಎರಡೂ ಕಿವಿಗಳಿಗೆ ಇಟ್ಟುಕೊಳ್ಳಬೇಕಾದೀತು'. ಸರೋಜಮ್ಮನ ಮಾತು ರಾಯರಿಗೆ ಇಷ್ಟವಾಗಲಿಲ್ಲ. ಒಂದೊಮ್ಮೆ ಜಯಂತಿ ಕುಲಕರ್ಣಿ ತನ್ನ ಮೊನ್ನೆಯ ಭಾಷಣವನ್ನು ಕೇಳಿಸಿಕೊಂಡಿದ್ದರೆ?

'ಅದ್ಭುತ ಸರ್, ಅದ್ಭುತ' ಎಂದು ಮನಸಾರೆ ಅಭಿನಂದಿಸುತ್ತಿದ್ದಳು ಎಂದುಕೊಂಡ ಅವರು, ಹೆಂಡತಿಯಲ್ಲಿ ಮತ್ತೇನನ್ನು ಆಡದೇ ಡಾ. ಬಿ. ಜನಾರ್ದನ ಭಟ್ಟರ 'ಜಗತ್ತಸಿದ್ಧ ಅನುವಾದಿತ ಕತೆಗಳನ್ನು' ಓದಲು ಹತ್ತಿದರು. ಅದು ಅವರ ಅಭಿಪ್ರಾಯ ಕೇಳಿ ವಾರದ ಹಿಂದೆ ಬಂದ ಕೃತಿಯಾಗಿತ್ತು.

ರಾಯರು ಆ ಕತೆಗಳನ್ನು ಓದುವುದರಲ್ಲಿ ಮಗ್ನರಾಗಿರುವುದನ್ನು ನೋಡಿದ ಸರೋಜಮ್ಮ ಸ್ಮಾರ್ಟ್‌ಫೋನ್ ಹಿಡಿದುಕೊಂಡರು. ವಾಟ್ಸಾಪ್ ಮತ್ತು ಫೇಸ್‌ಬುಕ್ ನೋಡುವುದರಲ್ಲಿ ಮಗ್ನರಾದರು.

ಇಬ್ಬರೂ ಅವರ ಪಾಡಿಗೆ ಅವರೇ ಎಂಬಂತಿರುವಾಗ ರಾತ್ರೆ ಗಂಟೆ ಏಳೂವರೆಯಾಯಿತು. ಇದಿರಿದ್ದ ಗಡಿಯಾರ ನೋಡಿದ ಸರೋಜಮ್ಮ ಪರದಿಂದ ಇಹಕ್ಕೆ ಬಂದ ಹಾಗೆ, ರಾಯರಿಗೆ ರಾತ್ರೆಯ ಊಟಕ್ಕೆ ಸಿದ್ಧತೆ ನಡೆಸಲು ಮೇಲೆದ್ದರು. ಅಷ್ಟರಲ್ಲಿ ಮನೆಯ ಮುಂದೆ ಕಾರು ಬಂದು ನಿಂತ ಶಬ್ದವಾಯಿತು. ಸರೋಜಮ್ಮ ಈ ಹೊತ್ತಿಗೆ ಯಾರು ಬರುತ್ತಾರೆ? ಯಾರೂ ಬರುವವರಿಲ್ಲವಲ್ಲ? ಎಂದುಕೊಂಡು ಕಿವಿ ನೆಟ್ಟಗೆ ಮಾಡಿದರು. ಅವರಿಗೆ ತಮ್ಮ ಮನೆಯ ಕಂಪೌಂಡಿನ ಗೇಟು ತೆರೆದುಕೊಂಡ ಶಬ್ದ ಕೇಳಿಸಿತು. ಕುತೂಹಲದಲ್ಲಿ ಸರೋಜಮ್ಮ 'ಗಂಡನಿಗೆ ಯಾರೋ ಬರುತ್ತಿದ್ದಾರೆ ಅಂತ ಕಾಣುತ್ತಿದೆ' ಎಂದು ಹೇಳುವಷ್ಟರಲ್ಲಿ ರಾಯರು ಪುಸ್ತಕದಿಂದ ಈಚೆಗೆ ಬಂದು 'ಹೌದಾ?' ಎಂಬಂತೆ ಎದ್ದು ನಿಂತರು. ಅಷ್ಟರಲ್ಲಿ ಮನೆಯ ಬಾಗಿಲಿಗೆ ದೊಡ್ಡದಾಗಿ ಬಡಿಯುವುದು ಕೇಳಿಸಿತು. ರಾಯರು ನಿಧಾನವಾಗಿ ಬಾಗಿಲ ಬಳಿ ಬಂದು ಬಾಗಿಲಿನಲ್ಲಿರುವ ಪೀಪ್‌ಹೋಲಿನಿಂದ ಇಣುಕಿದರೆ, ಹೊರಗೆ ನಾಲ್ಕೈದು ಮಂದಿ ಪಡ್ಡೆ ಹುಡುಗರು ನಿಂತದ್ದು ಕಾಣಿಸಿತು. ರಾಯರು ಕಾಲಿಂಗ್‌ಬೆಲ್ ಇದ್ದೂ ಇವರು ಬಾಗಿಲು ಬಡಿಯಬೇಕಾದರೆ ಗೂಂಡಾಗಳು ಇರಬಹುದೇ ಎಂದು ತರ್ಕಿಸಿದರು. ಬಾಗಿಲು ತೆರೆಯದೆ 'ಯಾರು ನೀವು? ಏನಾಗಬೇಕಿತ್ತು?' ಎಂದು ದೊಡ್ಡದಾಗಿಯೇ ಪ್ರಶ್ನಿಸಿದರು.

ಬಾಗಿಲ ಹೊರಗಿನಿಂದ, 'ನಾವು ಯಾರು, ಯಾಕೆ ಬಂದಿದ್ದೇವೆ ಎನ್ನುವುದನ್ನು ನೀವು ಬಾಗಿಲು ತೆಗೆಯದೆ ಹೇಳುವವರಲ್ಲ. ಮೊದಲು ಬಾಗಿಲು ತೆರೆಯಿರಿ' ಎಂಬ ಮಾತು ಎರಡು ಮೂರು ಮಂದಿಯ ಬಾಯಿಯಿಂದ ಒಮ್ಮೆಲೇ ಬಂದಂತಾಯಿತು. ರಾಯರು ಒಂದು ಕ್ಷಣ ಆತಂಕಗೊಂಡರೂ ತಕ್ಷಣ ಚೇತರಿಸಿಕೊಂಡು, 'ಇಲ್ಲ, ನಾನು ಬಾಗಿಲು ತೆರೆಯುವುದಿಲ್ಲ. ನೀವು ಯಾರೆಂದು ಹೇಳದೆ ನಿಮ್ಮನ್ನು ಒಳಗೆ ಬಿಡುವುದಿಲ್ಲ' ಎಂದು ದೊಡ್ಡದಾಗಿಯೇ ಹೇಳಿದರು.

ಅದನ್ನು ಕೇಳಿಸಿಕೊಂಡವರಲ್ಲಿ ಒಬ್ಬ ತನ್ನೊಂದಿಗೆ ಇರುವವರಿಗೆ ತುಳುವಿನಲ್ಲಿ 'ಭಾರೀ ಜೋರುಲ್ಲೆರು ಮೇರ್. ಬಾಕಿಲ್ ದೆತ್ತಿಜ್ಜಾಂಡ ಸರಿಯಾದ್ ಬುದ್ಧಿ ಕಲ್ಪಾವೆಂದ್ ಪಣ್ಲೆ (ಇವರು ಭಾರೀ ಜೋರಿದ್ದಾರೆ. ಬಾಗಿಲು ತೆರೆಯದಿದ್ದರೆ ಸರಿಯಾಗಿ ಬುದ್ಧಿ ಕಲಿಸುತ್ತೇವೆ ಎಂದು ಹೇಳಿ)' ಎಂದ.

ಆ ಮಾತನ್ನು ಕೇಳಿ ರಾಯರೂ ಸರೋಜಮ್ಮನೂ ಪರಸ್ಪರ ಮುಖ ನೋಡಿಕೊಂಡರು. ಸರೋಜಮ್ಮನಲ್ಲಿ ಆತಂಕ ಹೆಚ್ಚಾಯಿತು. ಆಕೆ ಹೊರಗಿರುವವರು ರಾಯರಿಗೆ ಏನಾದರೂ ಅಪಾಯ ಮಾಡಿಯೇ ಮಾಡುತ್ತಾರೆ ಎಂದುಕೊಂಡು, 'ಯಾಕೆ ನೀವು ಪೊಲೀಸ್ ಸ್ಟೇಶನ್ನಿಗೂ, ನಿಮ್ಮ ಗೆಳೆಯ ಸದಾಶಿವ ಶೆಟ್ಟರಿಗೂ ಫೋನು ಮಾಡಬಾರದು?' ಎಂದು ಪ್ರಶ್ನಿಸಿದರು.

ರಾಯರಿಗೆ ಹೆಂಡತಿಯ ಮಾತು ಸರಿಯೆನಿಸಿದರೂ ಪೊಲೀಸ್ ಸ್ಟೇಶನ್ ಅನ್ನು ಸಂಪರ್ಕಿಸುವ ಫೋನು ನಂಬರ್ ತನ್ನಲ್ಲಿ ಇಲ್ಲವೆಂದು ಹೆಂಡತಿಗೆ ಹೇಳಬೇಕೆನಿಸಿತು. ಅವರು ಹೆಂಡತಿಯ ಕಿವಿಯಲ್ಲಿ ತುಟಿ ಇಟ್ಟು ಆ ಮಾತನ್ನು ಹೇಳಿದರು. ಸರೋಜಮ್ಮನೂ ಸಣ್ಣಸ್ವರದಲ್ಲಿ 'ಅದಕ್ಕೇನು? ನೀವು ಪೊಲೀಸ್ ಸ್ಟೇಶನ್ನಿಗೆ ಫೋನು ಮಾಡುತ್ತೇನೆ' ಎಂದು ದೊಡ್ಡದಾಗಿ ಹೇಳಿ. ತಕ್ಷಣ ಈ ಗೂಂಡಾಗಳೆಲ್ಲ ಓಡಿ ಹೋಗುತ್ತಾರೆ' ಎಂದರು. ರಾಯರು 'ಹೌದಲ್ಲ' ಎಂಬಂತೆ ಹೊರಗಿರುವವರಿಗೆ ಕೇಳಿಸುವಂತೆ 'ನೀವು ಈ ರೀತಿ ನನ್ನನ್ನು ಬೆದರಿಸಲು ಮುಂದಾದರೆ, ನಾನು ಪೊಲೀಸ್ ಸ್ಟೇಶನ್ನಿಗೆ ಫೋನು ಮಾಡಬೇಕಾಗುತ್ತದೆ' ಎಂದರು.

ಅದನ್ನು ಕೇಳಿಸಿಕೊಂಡ ಕೂಡಲೇ ಹೊರಗಿದ್ದವನೊಬ್ಬ 'ಯಾರು ಹೆದರುತ್ತಾರೆ ಸ್ವಾಮೀ ನಿಮ್ಮ ಪೊಲೀಸರಿಗೆ? ಅವರು ಇಲ್ಲಿಗೆ ಬರುವ ಮೊದಲೇ ನಾವೇನು ಮಾಡುತ್ತೇವೆ ಗೊತ್ತಾ? ನಿಮ್ಮ ಶೆಡ್ಡಿನಲ್ಲಿರುವ ಕಾರಿಗೆ ಪೆಟ್ರೋಲು ಸುರಿದು ಬೆಂಕಿ ಹಚ್ಚುತ್ತೇವೆ. ನಿಮ್ಮ ಮನೆಯ ಬಾಗಿಲಿಗೆ ಬೀಗ ಹಾಕಿ ಹೋಗುತ್ತೇವೆ. ಆಮೇಲೆ ಪೊಲೀಸರು ಮಾತ್ರವಲ್ಲ, ಫೈರ್ ಸರ್ವೀಸಿನವರೂ ಬರುತ್ತಾರೆ' ಎನ್ನುತ್ತಾ, 'ನೀವು ಕಿಟಕಿಯ ಬಾಗಿಲು ತೆರೆದು ನೋಡಿ. ನಮ್ಮ ಕೈಯಲ್ಲಿ ಪೆಟ್ರೋಲ್ ಇದೆ, ಜಾಗ್ರತೆ' ಎಂದ.

ರಾಯರು ಬೆವರಿಹೋದರು. ಬಾಗಿಲು ತೆರೆಯುವುದೇ ಸರಿ ಎಂಬ ನಿರ್ಧಾರಕ್ಕೆ ಬಂದರು. ಸರೋಜಮ್ಮ ಸಣ್ಣಗೆ ನಡುಗುತ್ತಾ 'ಸ್ವಾಮಿ ದೇವರೇ' ಎಂದು ದೇವರಿಗೆ ಕೈಮುಗಿದರು. ತನ್ನ ಕುಟುಂಬದ ದೈವ ರಕ್ತೇಶ್ವರಿ ಮತ್ತು ಪಂಜುರ್ಲಿಯನ್ನು ಕಾಪಾಡುವಂತೆ ಪ್ರಾರ್ಥಿಸಿದರು.

ರಾಯರ ಎದೆಬಡಿತ ಜೋರಾಗಿ ಅವರಿಗೇ ಅದು ಕೇಳಿಸಿಕೊಳ್ಳುವಂತಾಯಿತು. ಆದರೂ ಬಂದದ್ದನ್ನು ಇದಿರಿಸುವ ಧೈರ್ಯವನ್ನು ನಿಧಾನವಾಗಿ ತಂದುಕೊಂಡ ಅವರು, ಬಾಗಿಲು ತೆರೆಯಲು ಮುಂದಾದರು. ಆದರೆ 'ಒಳಗೆ ಬನ್ನಿ' ಎನ್ನಲು ಅವರ ತುಟಿ ಸಹಕರಿಸಲಿಲ್ಲ. ಅಷ್ಟರಲ್ಲಿ ಹೊರಗಿದ್ದ ನಾಲ್ವರೂ ಒಳಗೆ ನುಗ್ಗಿ ರಾಯರ



## ಕಾಂತಾವರದ ಮಂದಹಾಸ

ಕಾಸರಗೋಡಿನ ಕೋಳ್ಯೂರಿನ ಡಾ. ನಾ. ಮೊಗಸಾಲೆ, ಕಾರ್ಕಳ ತಾಲ್ಲೂಕಿನ ಕಾಂತಾವರದ ಕೇಂದ್ರವಾದುದು ಹಾಗೂ ಕಾಂತಾವರವನ್ನು 'ಸಾಂಸ್ಕೃತಿಕ ಕರ್ನಾಟಕದ ಪಡಸಾಲೆ'ಯಾಗಿಸಿದ್ದು ಆಧುನಿಕ ಕರ್ನಾಟಕದ ಅಪೂರ್ವ ವಿದ್ಯಮಾನಗಳಲ್ಲೊಂದು. ಮೊಗಸಾಲೆ ಅವರು ವೃತ್ತಿಯಿಂದ ಆಯುರ್ವೇದ ವೈದ್ಯರು. ಊರಿನೊಳಗೆ ವೈದ್ಯರಾಗಿ ಔಷಧ ನೀಡಿದ ಅವರು, ನುಡಿ ಪರಿಚಾರಕರಾಗಿ ನಾಡಿನ ನಾಡಿಮಿಡಿತವಾಗಿ ಪರಿಣಮಿಸಿದರು. 'ಯುವಕಮಂಡಲ', 'ಕಾಂತಾವರ ಕನ್ನಡಸಂಘ', 'ವರ್ಧಮಾನ ಪ್ರಶಸ್ತಿ', 'ಅಲ್ಲಮಪ್ರಭು ಪೀಠ' ಅವರ ಕರ್ತೃತ್ವಶಕ್ತಿಯ ಸಾಕಾರರೂಪಗಳು.

ಬರಹಗಾರರಾಗಿಯೂ ಮೊಗಸಾಲೆ ಅವರ ಸಾಧನೆ ಬೆರಗು ಹುಟ್ಟಿಸುವಂತಹದ್ದು. ಕಾವ್ಯದ ಹದ ಮತ್ತು ಕಥನದ ಮುದ ಎರಡನ್ನೂ ಅವರು ಸಿದ್ಧಿಸಿಕೊಂಡವರು. ಹತ್ತು ಕವನಸಂಕಲನ, ಇಪ್ಪತ್ತೊಂದು ಕಾದಂಬರಿ, ಲೇಖನಗಳ ಏಳು ಸಂಗ್ರಹಗಳು ಅವರ ಕೃತಿಶ್ರೇಣಿಯಲ್ಲಿ ಎದ್ದುಕಾಣುತ್ತವೆ. 'ಉಲ್ಲಂಘನೆ' ಮತ್ತು 'ಮುಖಾಂತರ' ಅವರ ಪ್ರಸಿದ್ಧ ಮಹಾಕಾದಂಬರಿಗಳು. 'ಬಯಲ ಬೆಟ್ಟ' ಅವರ ಆತ್ಮವೃತ್ತಾಂತ. ರಾಜ್ಯೋತ್ಸವ ಪ್ರಶಸ್ತಿ ಹಾಗೂ ಮೂರು ಬಾರಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುಸ್ತಕ ಪ್ರಶಸ್ತಿ ಪಡೆದ ಹಿರಿಮೆ ಅವರದು. ಮಾಸ್ತಿ, ಗಳಗನಾಥ, ಕುವೆಂಪು, ಶಿವರಾಮ ಕಾರಂತ, ಹಲಸಂಗಿ ಮಧುರಚೆನ್ನರ ಹೆಸರಿನ ಪ್ರಶಸ್ತಿಗಳು ಅವರಿಗೆ ಸಂದಿವೆ; ತಮ್ಮ ಗೌರವವನ್ನೂ ಹೆಚ್ಚಿಸಿಕೊಂಡಿವೆ.

ಬರಹಗಳ ಮೂಲಕ 'ಸುಧಾ' ಓದುಗರಿಗೆ ಪರಿಚಿತರಾದ ಮೊಗಸಾಲೆ, ಈಗ 'ನೀರಿನೊಳಗಿನ ಮಂಜು' ಧಾರಾವಾಹಿಯ ಮೂಲಕ ಸಹೃದಯರಿಗೆ ಮತ್ತೆ ಮುಖಾಮುಖಿಯಾಗುತ್ತಿದ್ದಾರೆ.